ಎದುರಾಗುತ್ತಿದ್ದ ಸನ್ನಿವೇಶ. ಮಗ ಸೈನ್ಯದಲ್ಲಿ ಸುಬೇದಾರ ಎಂಬುದಷ್ಟು ಗೊತ್ತವಳಿಗೆ, ಮತ್ತೇನು ಅರ್ಥವಾಗುವುದಿಲ್ಲ. ಮಗ ಮರಳಿ ಹೋಗುತ್ತಿದ್ದಾನೆ ಎಂಬ ವಿಷಾದದೊಂದಿಗೆ ಇನ್ನೊಂದು ಕೊರಗು ಕಾಡುತ್ತಿತ್ತು ಅವಳನ್ನು. ಆತ ಸೈನ್ಯಕ್ಕೆ ಸೇರಿದಾಗಿನ ಸಂದರ್ಭ ಆಗಾಗ ನೆನಪಾಗುತ್ತಿದ್ದುದಕ್ಕೆ, ಮನೆಯಲ್ಲೀಗ ಅಂತಹ ಕಷ್ಟವೇನಿಲ್ಲ; ಇದ್ದುದರಲ್ಲಿ ಸಮೃದ್ಧಿಯಿದೆ ಅಂತ ಮಗನ ಮನಸಲ್ಲಿ ಸಮಾಧಾನವಿರಬೇಕು ಎಂಬ ಆಸೆಯವಳಿಗೆ. ಈ ಬಾರಿ ಆತ ಬರುವಾಗ ಆಗಲೆ ಜ್ಯೇಷ್ಠ ಮಾಸ. ಒಂದೆರಡು ಹದ ಮಳೆಬಂದು ಎರಡೆಕರೆಯಲ್ಲಿ ರಾಗಿ ಹಸಿರು ಚಾದರ ಹಾಸಿದ್ದನ್ನು ಮಗ ಕಣ್ತುಂಬಿಕೊಂಡು ಹೋಗಲಿ ಅಂತ ಇನ್ನಿಲ್ಲದಂತೆ ಆಶಿಸಿದ್ದಳು. ಅದೇನೋ, ದೇವರು ಭೂಮಿಮೇಲಿನ ಬಂಡೆಗಳನ್ನೆಲ್ಲ ಗುಡಿಸಿ ಇಲ್ಲೇ ಗುಡ್ಡೆಮಾಡಿಟ್ಟುಕೊಂಡ ಹಾಗೆ ಸುತ್ತಮುತ್ತೆಲ್ಲ ಕಲ್ಲುಬಂಡೆ ಬೆಟ್ಟಗಳು. ಬಂಡೆಗಳಿಗೆ ಹೆದರಿಯೋ ಎಂಬಂತೆ ಮಳೆ ಬೀಳೊದು ಕಮ್ಮಿ. ಹೋದ ವರ್ಷವಂತು ಮಳೆಯೇ ಇಲ್ಲದ ಲೆಕ್ಕ. ಅಷ್ಟು ದೊಡ್ಡ ನರಸಾಪುರ ಕೆರೆ ಹೊಂಡದ ಗಾತ್ರಕ್ಕಿಳಿದಿತ್ತು. ಈ ವರ್ಷ ಸಮೃದ್ಧಮಳೆ ಅಂತ ಸ್ವಾಮಿಯೋರು ಕಾರಣಿಕ ನುಡಿದಿದ್ದರು. ಆದರೆ ಜ್ಯೇಷ್ಠ ಕಳೆದು ಆಷಾಢ ಸುರುವಾದರೂ ಒಂದು ಮಳೆ ಬಿದ್ದಿರಲಿಲ್ಲ. ಇನ್ನೂ ಇದೆ ಮಳೆಗಾಲ; ಮುಗುದೇನೂ ಹೋಗಲಿಲ್ಲ ಅನ್ನೋ ಭರವಸೆಯಲ್ಲಿ ಬೆಟ್ಟದ ಭೈರವನ ಗುಡಿ ಶಕುನ ಕೇಳಿಸಿ, ಇನ್ನೊಂದು ವಾರದಲ್ಲಿ ಮುಸಲಧಾರೆ ಮಳೆ ಅನ್ನೋ ಭವಿಷ್ಯವಾಣಿಯಿಂದ ಹುಮ್ಮಸ್ಸು ತುಂಬಿಕೊಂಡು ಬಂದವಳು ಕಾತರಗಣ್ಣಾಗಿ ಕಾದಳು. ನಾಕುದಿನದಿಂದ ಭೈರವನ ಜಡೆಯಂತಾ ಕಾರ್ಮೋಡಗಳು ಉರುಳುರುಳಿ ಆಕಾರ ತಳೆಯುತ್ತಾ ಆಕಾಶವನ್ನಾವರಿಸಿಕೊಂಡು ಬಂದರೂ ಒಂದುಹನಿ ಸುರಿಸದೇ ಯಾವುದೋ ಅರ್ಜೆಂಟು ಕೆಲಸವಿರುವಂತೆ ಮುಂದೆ ಹೋಗುತ್ತಲೆ ಇದ್ದವು. ಇವತ್ತು ಬೆಳಿಗ್ಗೇನೆ ಜಳಜಳ ಬಿಸಿಲು ಅಂಗಳದಲ್ಲಿ ಬಿದ್ದು, 'ಈ ಸೂರ್ಯನ್ನ ಜಾಡಿಸಿ ಒದ್ದು ಬಿಡಬೇಕು...' ಅಂತ ಸಶಬ್ದವಾಗಿ ಶಪಿಸಿದವಳು ಮಗ ಶಾನುಭೋಗರ ಮನೆ ತಿರುಮಲನೊಡನೆ ಮಾತನಾಡುತ್ತ ಕುಳಿತಿದ್ದ ಜಗುಲಿಗೆ ಬಂದು ಗೋಡೆಯ ಭಾಗವಾಗಿದ್ದಳು. 'ನರಸಕಾಕಾ, ಮತ್ತೊಂದ್ಸಲ ಸೋತ್ರೇ ಆ ದೇಶಕ್ಕೆ ಬುದ್ಧಿ ಬರೋದು. ಮೂರೂ ದೇಶಗಳ ಹತ್ರ ಈಗ ಧಂಡಿಯಾಗಿ ಶಸ್ತ್ರಾಸ್ತ್ರಗಳಿವೆ. ಭಯಂಕರ ಯುದ್ಧವಾಗೋದು ಗ್ಯಾರಂಟಿ' ತಿರುಮಲನ ಮಾತಿಗೆ ಉರಿಗಣ್ಣು ಬೀರಿ ದೇವರಕೋಣೆಯತ್ತ ಎದ್ದುಹೋದ ತಾಯಿಯನ್ನು ಕಣ್ಣ ಕೊನೆಯಲ್ಲೆ ಗಮನಿಸಿದರು ನರಸಪ್ಪ.

ಮನೆ ಹಿಂದುಗಡೆಯಿಂದ 'ಕ್ರಾಂ... ಕ್ರಾಂ' ಆಕ್ರಂದನ ಕೇಳಿ 'ಅಮ್ಮ... ಹುಂಜ ಕುಯ್ಸಿದ್ಯಾ?' ವಿಚಾರಿಸಿದ್ದಕ್ಕೆ, 'ಹೌದೋ ನರಸಾ... ಇನ್ನು ಒಂದ್ವರ್ಷದಮೇಲೇ ನೀ ಬರೋದು...' ಅಂದವಳು ಹಣಿಕಿ ನೋಡಿ '...ಶಾನುಭೋಗ್ರಮನೆ ಯುದ್ಧದೇವತೆ ಜಾಗ ಖಾಲಿ ಮಾಡ್ತಾ?' ಅಂತ ಸೇರಿಸಿಳು. 'ಅಲ್ಲಾ ಅಲ್ಲೇನು ಮಾಂಸಕ್ಕೆ ಬರಗಾಲ? ದಿನಬಿಟ್ಟು ದಿನ ಚಿಕನ್ನು ಮಟನ್ನು ಸಿಗತದೆ ನಂಗೆ' ಆಕ್ಷೇಪಿಸಿದ್ದಕ್ಕೆ, 'ಸಿಗತದೆ. ಆದ್ರೆ ಇದು ಮನೇಲಿ ಮಾಡಿದ್ದು; ಎಲ್ಲಾ ಒಟ್ಟಿಗೆ ಕೂತು ಊಟ ಮಾಡದಲ್ವೇನೋ?...' ಉತ್ತರ ಬಂತು. ಮೂಕರಾದರು. ಇವರೆಲ್ಲಾ ಹಾಗೇ. ಅಮ್ಮ ಬಾಯಿಬಿಟ್ಟು ಹೇಳುತ್ತಾಳೆ; ಕಾಂತಾ ಹೇಳೋದಿಲ್ಲ ಅಷ್ಟೆ. ಮದುವೆಯಾಗುವಾಗ ಅವರು ಸಿಪಾಯಿಯಿಂದ ನಾಯ್ಕರಾಗಿದ್ದರು. ಶರ್ಟಿನ ತೋಳಿಗೆ ಅಡ್ಡವಾಗಿ ಎರಡು ಬಿಳಿಪಟ್ಟಿ ಬಂದಿತ್ತು. ಇವರ ಬಟಾಲಿಯನ್ನು ಆಸಾಮದ ತಿನ್ಸುಕಿಯಾದಲ್ಲಿತ್ತು. ಹೆಂಡತಿಯೊಂದಿಗೆ ಆರುತಿಂಗಳಿರಲಷ್ಟೆ ಅನುಮತಿ ಸಿಕ್ಕಿತ್ತು. ಮಗು ಚಾಕಲೇಟನ್ನು ಎರಡುಸಾರಿ ಚೀಪಿ ವಾಪಸು ಮಾಡಬೇಕಾದ ಮನಃಸ್ಥಿತಿಯಲ್ಲಿ ಮಡದಿಯನ್ನು ಊರಿಗೆ ಕಳಿಸಿದ್ದರು. ಮರುವರ್ಷವೆ ಬಟಾಲಿಯನ್